www.ecourtsindia.com



ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿನಾಂಕ: **22.03.2025**
ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :: ಶ್ರೀ ಫಿರ್ಯಾದುದಾರರ ಪರ ವಕೀಲರಿಂದ

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯದಿಂದ ಕೂಡಿದ್ದು ಅದರಲ್ಲಿನ ಸಹಿಯು ನನ್ನದೇ ಇರುತ್ತದೆ.

ಈಗ ನಾನು ನೋಡುತ್ತಿರುವ ನಿಪಿ-6 ರಲ್ಲಿರುವ ಸಹಿ ನನ್ನದೇ ಇದ್ದು ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು :: ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

34 ನೇ ಎಸಿಜೆಎಂ ನ್ಯಾಯಾಧೀಶರು,
ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC0C0139262022/truecopy/order-7.pdf

<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿನಾಂಕಃ **18.08.2025**</u>
<u>ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಶ್ರೀ ಎ.ಟಿ.ಎಂ ವಕೀಲರಿಂದ</u>

1. ನಾನು ಐಟಿಐ ಓದಿರುತ್ತೇನೆ. ಫಿರ್ಯಾದುದಾರರು ನನ್ನ ತಾಯಿ. ನನಗೆ ದೂರಿನ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು 2003 ರಿಂದ ಹೆಚ್.ಎ.ಎಲ್ ನಲ್ಲಿ ಕೆಲಸ ಮಾಡುತ್ತೇನೆ. ಆರೋಪಿ 2005 ರಿಂದ ಹೆಚ್.ಎ.ಎಲ್ ನಲ್ಲಿ ಕೆಲಸ ಮಾಡುತ್ತಾರೆ. ನಾವಿಬ್ಬರು ಒಂದೇ ವಿಭಾಗದಲ್ಲಿ ಕೆಲಸ ಮಾಡುತ್ತೇವೆ. 2007 ರಿಂದ ನನಗೆ ಆರೋಪಿ ಪರಿಚಯ ಇದೆ. ಆರೋಪಿ ನನ್ನ ಆತ್ಮೀಯ ಸ್ನೇಹಿತ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ಮಧ್ಯ ಹಣಕಾಸಿನ ವ್ಯವಹಾರ ಇತ್ತು ಎಂದರೆ ಸರಿಯಲ್ಲ. ಆರೋಪಿ ನನ್ನ ಬಳಿ ನಗದು ರೂಪದಲ್ಲಿ ಹಣದ ಸಹಾಯ ಪಡೆಯುತ್ತಿದ್ದು ಅದನ್ನು ಬಡ್ಡಿ ಸಮೇತ ಹಿಂದಿರುಗಿಸುತ್ತಿದ್ದರು ಎಂದರೆ ಸರಿಯಲ್ಲ. ಕೆಲವು ಸಮಯದಲ್ಲಿ ಆರೋಪಿ ನನ್ನ ಬ್ಯಾಂಕ್ ಖಾತೆಗೆ ಹಣ ಸಂದಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿ ನಮ್ಮಿಬ್ಬರ ಹಣದ ವ್ಯವಹಾರದಲ್ಲಿ ಭದ್ರತೆಗಾಗಿ ನನಗೆ ಚೆಕ್ಕನ್ನು ಕೊಟ್ಟಿದ್ದು ಅದನ್ನು ದುರುಪಯೋಗಪಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ.

2. ನಾನು ಎಸ್.ಬಿ.ಐ ಬ್ಯಾಂಕ್‌ನಲ್ಲಿ ಖಾತೆ ಹೊಂದಿದ್ದು ಅದರ ನಂ. 30639387160 ಎಂದರೆ ಸರಿ. ಈಗ ನನಗೆ ತೋರಿಸುತ್ತಿರುವ ಬ್ಯಾಂಕ್ ಚಲನ್ ಕೌಂಟರ್ ಪೈಲ್ ಇದ್ದು 2013 ರಲ್ಲಿ ನನ್ನ ಖಾತೆಗೆ ರೂ. 50 ಸಾವಿರ ಹಣ ಜಮಾ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಅದನ್ನು ಒಪ್ಪಿದ್ದರಿಂದ ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ಆರೋಪಿ ನನ್ನ ಬಳಿ ಪಡೆದುಕೊಂಡ ಹಣವನ್ನು ಹಿಂದಿರುಗಿಸುವ ಸಲುವಾಗಿ ಜಮಾ ಮಾಡಿದ ರಶೀದಿಯಾಗಿರುತ್ತದೆ ಎಂದರೆ ಸರಿಯಲ್ಲ. 2012 ರಿಂದ 2021 ರವರೆಗೆ ನಾನು ಆರೋಪಿಗೆ ಹಣದ ಸಹಾಯ ಮಾಡುತ್ತಿದ್ದು ಅದನ್ನು ನನಗೆ ಆರೋಪಿ ಹಿಂದಿರುಗಿಸುತ್ತಿದ್ದರು ಎಂದರೆ ಸರಿಯಲ್ಲ.

3. ಡಿಸೆಂಬರ್ 2021 ರಲ್ಲಿ ನನ್ನ ಮತ್ತು ಆರೋಪಿಯ ಮಧ್ಯ ಹಣಕಾಸಿನ ಸಲುವಾಗಿ ತಕರಾರು ಬಂತು ಎಂದರೆ ಸರಿಯಲ್ಲ. ಡಿಸೆಂಬರ್ 2021 ರಲ್ಲಿ ಆರೋಪಿಯ ಫಾರ್ಮ ಹೌಸ್ ನ ಗೃಹಪ್ರವೇಶಕ್ಕೆ ನಾನು ಹಾಜರಾಗಿದ್ದೆ ಎಂದರೆ ಸರಿಯಲ್ಲ. ಡಿಸೆಂಬರ್ 2021 ರಿಂದ ಆರೋಪಿ ಬಿ.ಎಂ ಕಾವಲ್, ಕೆಂಗೇರಿ ಹೋಬಳಿಯಲ್ಲಿನ ಫಾರ್ಮ ಹೌಸ್ ನಲ್ಲಿ ವಾಸವಾಗಿದ್ದರು ಎನ್ನುವ ವಿಷಯ ನನಗೆ ಹಾಗೂ ನನ್ನ ತಾಯಿಗೆ ಗೊತ್ತಿತ್ತು ಎಂದರೆ ಸರಿ. ಡಿಸೆಂಬರ್ 2021 ರ ನಂತರ

This is a True Copy of the Court Records Online. Authenticated @ districts.ecourtsindia.com/cnr/KABC0C0139262022/truecopy/order-7.pdf

www.ecourtsindia.com



ನಾನು ನನ್ನ ತಾಯಿಯ ಮೂಲಕ ಆರೋಪಿ ವಿರುದ್ಧ ಹೆಚ್.ಎ.ಎಲ್ ಪೊಲೀಸ್ ಠಾಣೆಯಲ್ಲಿ ಸುಳ್ಳು ಪೊಲೀಸ್ ದೂರು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಸದರಿ ದೂರಿನ ಮೇರೆಗೆ ಎನ್.ಸಿ.ಆರ್ ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ನನಗೆ ಕೊಟ್ಟ ಚೆಕ್ಕಗಳನ್ನು ದುರುಪಯೋಗಪಡಿಸಿಕೊಳ್ಳುವ ಉದ್ದೇಶದಿಂದ ನನ್ನ ತಾಯಿ ಮುಖಾಂತರ ಪೊಲೀಸ್ ದೂರು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ನಿಪಿ-7 ರ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸ್ ಠಾಣೆಯಲ್ಲಿ ಆರೋಪಿ ಮತ್ತು ನಾವು ನಮ್ಮ ಮಧ್ಯ ಇರುವ ತಕರಾರನ್ನು ಪರಸ್ಪರ ಮಾತುಕತೆ ಮಾಡಿಕೊಂಡು ಸಮಸ್ಯೆ ಬಗೆಹರಿಸಿಕೊಳ್ಳುತ್ತೇವೆ ಎಂದಿದ್ದಕ್ಕೆ ಪ್ರಕರಣವನ್ನು ಮುಕ್ತಾಯ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ-7 ರ ಪ್ರಕರಣದ ನಂತರ ಆರೋಪಿ ನನ್ನನ್ನು ಭೇಟಿಯಾಗಿ ತಾನು ಕೊಟ್ಟ ಚೆಕ್ಕುಗಳನ್ನು ಹಿಂದಿರುಗಿಸಿ ಕೊಡಿ ಎಂದು ಕೇಳಿದ್ದರು ಎಂದರೆ ಸರಿಯಲ್ಲ.

4. ನಾನು ಆದಾಯ ತೆರಿಗೆ ಪಾವತಿಸುತ್ತೇನೆ. ನನ್ನ ಆದಾಯ ರಿಟರ್ನ್ಸ್ ನಲ್ಲಿ ಆರೋಪಿಗೆ ನಾನು ಕೊಟ್ಟಿರುವ ಹಣವನ್ನು ತೋರಿಸದೇ ಇರುವ ಕಾರಣ ನನಗೆ ಆರೋಪಿ ಕೊಟ್ಟ ಚೆಕ್ಕುಗಳನ್ನು ನನ್ನ ತಾಯಿ ಮುಖಾಂತರ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ತಾಯಿ ಮಧ್ಯ 2012 ರಲ್ಲಿ ವ್ಯವಹಾರ ಆಗಿದ್ದು 2013 ರಲ್ಲಿ ಆರೋಪಿ ನನ್ನ ತಾಯಿಗೆ ಎಲ್ಲಾ ಹಣ ಹಿಂದಿರುಗಿಸಿರುತ್ತಾರೆಂದರೆ ಸರಿಯಲ್ಲ. ನಿಪಿ-6 ರ ದಾಖಲೆಯನ್ನು ನಾನು ಮತ್ತು ನನ್ನ ತಾಯಿ ಸೇರಿ ಈ ಪ್ರಕರಣದ ಸಲುವಾಗಿ ಸೃಷ್ಠಿಸಿರುತ್ತೇವೆಂದರೆ ಸರಿಯಲ್ಲ. 2021 ರಲ್ಲಿ ನನಗೆ ಮತ್ತು ಆರೋಪಿಗೆ ತಕರಾರು ಬಂದಿದ್ದರಿಂದ ಆರೋಪಿಯ ಚೆಕ್ಕುಗಳನ್ನು ನನ್ನ ತಾಯಿ ಮೂಲಕ ಹಾಜರುಪಡಿಸಿ ಸುಳ್ಳು ಪ್ರಕರಣಗಳನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಈ ಪ್ರಕರಣದ ಚೆಕ್ಕಿಗೂ ನನ್ನ ತಾಯಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

34 ನೇ ಎಸಿಜೆಎಂ ನ್ಯಾಯಾಧೀಶರು,
ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC0C0139262022/truecopy/order-7.pdf